


ಅನಂತರ ಅವರು ಮೊಟ್ಟೆಕೋಳಿಯನ್ನು ಕುಯ್ದು ಅಡುಗೆ ಮಾಡಿದರು. ರಾತ್ರಿಯಾಯ್ತು. ಕೋಳಿಮಾಂಸದ ಊಟದ ಜೊತೆಗೆ ಮೃದುವಾದ ವಸ್ತುವಿನಿಂದ ಸೂಪನ್ನು ಸಿದ್ಧಪಡಿಸಿದರು. ಸಿದ್ಧಗೊಳಿಸಿದ ಊಟವನ್ನು ಮೇಜಿನ ಮೇಲೆ ಇಟ್ಟು ಬಾಗಿಲು ಮುಚ್ಚಿದರು. ಆಗ ಆ ಕಪ್ಪೆ ಮೂಲೆಯಿಂದ ಮೇಜಿನ ಬಳಿಗೆ ಬಂದು ಅಲ್ಲಿ ಇಟ್ಟಿದ್ದ ಊಟವನ್ನೆಲ್ಲಾ ತಿಂದು ಮುಗಿಸಿತು. ಅನಂತರ ಅದು ಮತ್ತೆ ರೂಮಿನ ಮೂಲೆಯಲ್ಲಿ ಹೋಗಿ ಅಡಗಿ ಕುಳಿತಿತು.

ಲಾರ್ಡ್ ಸೂರ್ಯದೇವ ಈಗ ಮತ್ತೊಂದು ಕಾಗದವನ್ನು ಅವನಿಗೆ ಬರೆದನು. 'ನೀನು ನನ್ನ ಅಳಿಯ. ನೀನು ಕಳುಹಿಸಿದ್ದ ಹಣವನ್ನೆಲ್ಲಾ ಸ್ವೀಕರಿಸಿದ್ದೇನೆ. ಆದರೆ ಮದುವೆಗೆ ಇನ್ನೂ ಹೆಚ್ಚು ಹಣವನ್ನು ಕೊಡುವ ಹೊಣೆ ನಿನಗಿದೆ' ಎಂದು ಆ ಪತ್ರದಲ್ಲಿ ಬರೆದು ತಿಳಿಸಿದನು. ಬರೆದ ಕಾಗದವನ್ನು ಮಡಿಚಿ ಅದೇ ಮೇಜಿನ ಮೇಲೆ ಇಟ್ಟು ರೂಮಿನಿಂದ ಹೊರಗೆ ಹೋದನು. ಆಗ ಕಪ್ಪೆ ತಾನು ಅಡಗಿದ್ದ ಜಾಗದಿಂದ ಹೊರಬಂದು ಮೇಜಿನ ಮೇಲಿದ್ದ ಆ ಪತ್ರವನ್ನು ತೆಗೆದುಕೊಂಡಿತು. ಅಲ್ಲಿಂದ ಅದು ಹೋಗಿ ಖಾಲಿ ಕೊಡದ ತಳದಲ್ಲಿ ಅಡಗಿ ಕುಳಿತು ನಿದ್ದೆ ಹೋಯ್ತು.